ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ



**'For me violence is beautiful'** (ನನ್ನ ಮಟ್ಟಿಗೆ ಹಿಂಸೆಯೂ ಸೌಂದರ್ಯವೇ)

'ನಿಮ್ಮ ಸಿನಿಮಾಗಳಲ್ಲಿ ಯಾಕೆ ಅಷ್ಟೊಂದು ಹಿಂಸೆ ಇರುತ್ತದೆ?' ಎಂಬ ಪ್ರಶ್ನೆಗೆ ದಕ್ಷಿಣ ಕೊರಿಯಾದ ಪ್ರಸಿದ್ಧ ನಿರ್ದೇಶಕ ಕಿಮ್ ಕಿ ಡುಕ್ ಉತ್ತರಿಸಿದ್ದು ಹೀಗೆ. ಅವನು ಇಷ್ಟಕ್ಕೇ ಮಾತು ನಿಲ್ಲಿಸುವುದಿಲ್ಲ. ಮತ್ತೂ ಮುಂದುವರಿದು ಹೀಗೆ ವಿವರಿಸುತ್ತಾನೆ; 'ನಮ್ಮ ಬದುಕು ಹಲವು ವರ್ಣಗಳಿಂದ ರೂಪುಗೊಂಡಿರುವ ಒಂದು ಚಿತ್ರ. ಪ್ರೇಮ ಎನ್ನುವುದು ಅವುಗಳಲ್ಲಿ ಒಂದು ಬಣ್ಣವಷ್ಟೆ. ಎಲ್ಲಿ ಬೆಳಕು ಇರುತ್ತದೆಯೋ ಅಲ್ಲಿ ಕತ್ತಲೆಯೂ ಇರುತ್ತದೆ. ಅಂತೆಯೇ ಕಪ್ಪುಬಿಳುಪು ಸಹ ಬದುಕಿನ ಬಣ್ಣಗಳೇ. ನನ್ನ ಸಿನಿಮಾಗಳು ಮನುಷ್ಯ ಬದುಕಿನ ನೋವನ್ನು ಆಧರಿಸಿರುತ್ತವೆ. ಸಿನಿಮಾಗಳ ಮೂಲಕ ನಾನು ಮನುಷ್ಯನ ನೋವು ಮತ್ತು ಸಂವೇದನೆಗಳನ್ನು ಕಟ್ಟಿಕೊಡಲು ಪ್ರಯತ್ನಿಸುತ್ತಿರುತ್ತೇನೆ'.

ಈ ಮೇಲಿನ ಮಾತುಗಳನ್ನು ಕಿಮ್ ಕಿ ಡುಕ್‌ನ ಇದುವರೆಗಿನ ಎಲ್ಲ ಸಿನಿಮಾಗಳನ್ನು ಒಂದೇ ಎಳೆಯಲ್ಲಿ ಜೋಡಿಸಬಹುದಾದ ಮೂಲ ತಂತುವಾಗಿಯೂ ಗ್ರಹಿಸಬಹುದು. ಅವನ ಎಲ್ಲ ಸಿನಿಮಾಗಳಲ್ಲಿಯೂ ಹಿಂಸೆ ಮತ್ತು ಲೈಂಗಿಕತೆ ಈ ಎರಡು ಅಂಶಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ. ಕಿಮ್ ಕಿ ಡುಕ್‌ನನ್ನು ಅತಿಯಾಗಿ ಮೆಚ್ಚಿಕೊಳ್ಳುವ ಅನೇಕರಿಗೆ ಅವನ ಕುರಿತಾಗಿ ಇರುವ ತಕರಾರೂ ಈ ವಿಷಯಕ್ಕೆ ಸಂಬಂಧಿಸಿದ್ದೇ. ಹಾಗೆಂದು ಹಿಂಸೆ ಮತ್ತು ಲೈಂಗಿಕತೆಗಳನ್ನು ವ್ಯಾಪಾರವಾಗಿಸಿಕೊಳ್ಳುವ ನಮ್ಮಲ್ಲಿನ ಕಮರ್ಷಿಯಲ್ ಮಾದರಿಯ ಸಿನಿಮಾಗಳ ಜತೆ ಅವನ ಸಿನಿಮಾಗಳನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ.